**ಕರ್ನಾಟಕ ಸರ್ಕಾರ**

**ಸಂಖ್ಯೆ:ಆಇ 4 (ಇ) ಸೇನಿಸೇ 2020**

**ಕರ್ನಾಟಕ ಸರ್ಕಾರದ ಸಚಿವಾಲಯ**
**ವಿಧಾನಸೌಧ,**
**ಬೆಂಗಳೂರು, ದಿನಾಂಕ 29.08.2020**

**ಅಧಿಕೃತ ಜ್ಞಾಪನ**

**ವಿಷಯ:** ಕೋವಿಡ್-19 ಸಂಬಂಧದಲ್ಲಿ ಸಾಂಕ್ರಾಮಿಕ ರೋಗಕ್ಕೆ ಒಳಪಟ್ಟಿರುವ ಸರ್ಕಾರಿ ನೌಕರರ ಪ್ರಕರಣಗಳ ನಿರ್ವಹಣೆ ಕುರಿತಂತೆ

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಆಇ 4 (ಇ) ಸೇನಿಸೇ 2020 ದಿನಾಂಕ 22.7.2020

******

ಸರ್ಕಾರಿ ನೌಕರನು ವಾಸವಿರುವ ಸ್ಥಳವನ್ನು ಕೋವಿಡ್-19 ವ್ಯಾಪ್ತಿತ ಪ್ರದೇಶವೆಂದು ಸಕ್ಷಮ ಪ್ರಾಧಿಕಾರವು ಘೋಷಿಸಿ ಸದರಿ ಕ್ಷೇತ್ರದೊಳಗೆ ಅಥವಾ ಅದರ ವ್ಯಾಪ್ತಿಯಿಂದ ಹೊರಗೆ ಸಂಚರಿಸುವಲ್ಲಿ ನಿರ್ಬಂಧವನ್ನು ವಿಧಿಸಿರುವಲ್ಲಿ ಅಥವಾ ಅಂತಹ ಸರ್ಕಾರಿ ನೌಕರನ ಕುಟುಂಬದ ಯಾವುದೇ ಸದಸ್ಯರು ಸದರಿ ಸಾಂಕ್ರಾಮಿಕ ರೋಗಕ್ಕೆ ಒಳಪಟ್ಟಿರುವ ಕಾರಣದಿಂದಾಗಿ ಅಂತಹ ಸರ್ಕಾರಿ ನೌಕರನು/ಕುಟುಂಬದ ಸದಸ್ಯರು ಹೊರಗಡೆ ಸಂಚರಿಸದೆ ಪ್ರತ್ಯೇಕತೆಯನ್ನು ಕಾಪಾಡಬೇಕಾಗುವ ಸಂದರ್ಭಗಳನ್ನು ಉಲ್ಲೇಖಿಸಿ ಸಕ್ಷಮ ಪ್ರಾಧಿಕಾರವು ಯಾವುದೇ ಸಂಚಾರವನ್ನು ನಿರ್ಬಂಧಿಸಿ ಹೊರಡಿಸಿರುವ ಆದೇಶದ ತತ್ಪರಿಣಾಮವಾಗಿ ಸರ್ಕಾರಿ ನೌಕರರು ತಮ್ಮ ದೈನಂದಿನ ಕಚೇರಿಯ ಕರ್ತವ್ಯಕ್ಕೆ ಹಾಜರಾಗುವಲ್ಲಿ ಅಡಚಣೆಯಿರುವಲ್ಲಿ, ಸಂದರ್ಭಾನುಸಾರ ದಿನಾಂಕ 22.7.2020ರ ಆದೇಶದಲ್ಲಿ ವಿಧಿಸಿರುವ ಇತರೆ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸುವ ಷರತ್ತಿಗೆ ಒಳಪಟ್ಟು ಅಂತಹ ಅವಧಿಯನ್ನು ವಿಶೇಷ ಸಾಂದರ್ಭಿಕ ರಜೆ ಎಂದು ಪರಿಗಣಿಸಿ ಸಕ್ಷಮ ಪ್ರಾಧಿಕಾರಗಳು ಮಂಜೂರು ಮಾಡುವಲ್ಲಿ ಆದೇಶಿಸಲಾಗಿದೆ.

ದಿನಾಂಕ 22.7.2020ರ ಆದೇಶದನ್ವಯ ಕಲ್ಪಿಸಲಾಗಿರುವ ವಿಶೇಷ ಸಾಂದರ್ಭಿಕ ರಜೆಯ ಸೌಲಭ್ಯಗಳು "ಸ್ವತಃ ಸರ್ಕಾರಿ ನೌಕರನೇ ಸದರಿ ಸಾಂಕ್ರಾಮಿಕ ರೋಗಕ್ಕೆ ಒಳಪಟ್ಟು ಚಿಕಿತ್ಸೆ ಪಡೆಯಬೇಕಾಗುವ ಪ್ರಕರಣಗಳಿಗೆ ಸಹ ಅನ್ವಯಿಸಿ ಮಂಜೂರು ಮಾಡುವಲ್ಲಿ ಅನ್ವಯಿಸುವ" ಕುರಿತು ಹಲವು ಸಕ್ಷಮ ಪ್ರಾಧಿಕಾರಿಗಳು ಸರ್ಕಾರದಿಂದ ನಿರ್ದಿಷ್ಟ ಸ್ಪಷ್ಟೀಕರಣವನ್ನು ಕೋರುತ್ತಿದೆ.

ದಿನಾಂಕ 22.7.2020ರ ಆದೇಶದ ಭಾಗದಲ್ಲಿನ ಅಂಶ (iii)ರಲ್ಲಿನ "If an employee is required to be in isolation on account of being primary contact of a patient in any pandemic or on account of the infection in the family/house hold" ಎಂಬ ಅವಕಾಶಗಳು "ಸ್ವತಃ ಸರ್ಕಾರಿ ನೌಕರನೇ ಸದರಿ ಸಾಂಕ್ರಾಮಿಕ ರೋಗಕ್ಕೆ ಒಳಪಟ್ಟು ಚಿಕಿತ್ಸೆ ಪಡೆಯಬೇಕಾಗುವ ಪ್ರಕರಣಗಳಿಗೆ ಸಹ ಅನ್ವಯಿಸತಕ್ಕದ್ದು" ಎಂಬುದಾಗಿ ಅರ್ಥೈಸತಕ್ಕದಾಗಿ ಈ ಮೂಲಕ ಸ್ಪಷ್ಟಪಡಿಸಲಾಗಿದೆ.

Suvarna BS
(ಬಿ.ಎಸ್.ಸುವರ್ಣ)
ಸರ್ಕಾರದ ಉಪಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-1)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು ಕೋರಿ ಕಳುಹಿಸಿದೆ.

ಪ್ರತಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ಅಪರಮುಖ್ಯ ಕಾರ್ಯದರ್ಶಿಗಳು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗ.
6. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
8. ಮಹಾಲೇಖಪಾಲರು (ಕಂದಾಯ, ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಬೆಂಗಳೂರು
9. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
10. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

Scanned with CamScanner